ಮಧ್ಯಂತರ ಅರ್ಜಿ ನಂಬ್ರ 2 ರ ಆದೇಶದ ಮೇರೆಗೆ ಸಾಕ್ಷಿಯ ಮುಖ್ಯ ವಿಚಾರಣೆ ಮಾಡಲು ಅವಕಾಶ ನೀಡಿದ ಮೇರೆಗೆ **ದಿಃ11-09-2023 ರಂದು** ಸಾಕ್ಷಿದಾರರನ್ನು ಕರೆಯಿಸಿ **ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ** ಶ್ರೀ ಎಸ್ ಎಸ್ ಎನ್ **ವಕೀಲರಿಂದ**

ನಾನು ಈ ದಿನ ಮೃತ ಅವಿನಾಶ ಇವನಿಗೆ ಸಂಬಂಧಪಟ್ಟಂತಹಾ ಇ ಟಿಕೇಟ್ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಯಿತು. ಮೃತ ನನ್ನ ಮಗ ಅವಿನಾಶ ಸಂಜೀವ ಪೂಜಾರಿ ಇವನ ಮಾರ್ಚ – 2015, ಸಪ್ಟೆಂಬರ್ -2017

ಮತ್ತು ಅಕ್ಟೋಬರ್ - 2017 ರ ಪೇ ಸ್ಲಿಪ್ ಹಾಜರುಪಡಿಸಿದ್ದು, ಅವುಗಳು ಎಂಬೇಸಿಯಿಂದ ಎಟೆಸ್ಟೆಡ್ ಆಗಿಲ್ಲ ಅಂತ ಎದುರುದಾರ ಪರ ವಕೀಲರು ತಕರಾರು ಮಾಡಿದ್ದು ತಕರಾರಿಗೆ ಒಳಪಟ್ಟು ಅವುಗಳನ್ನು ನಿಪಿ-17, ನಿಪಿ-18 ಮತ್ತು ನಿಪಿ-19 ಎಂದು ಕ್ರಮವಾಗಿ ಗುರುತಿಸಲಾಯಿತು. ಮೃತ ಅವಿನಾಶ ಇವನಿಗೆ ನೀಡಿದಂತಹಾ ಸರ್ವೀಸ್ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ಸಹಾ ತಕರಾರಿಗೆ ಒಳಪಟ್ಟು ನಿಪಿ-20 ಎಂದು ಗುರುತಿಸಲಾಯಿತು. ಮೃತ ಅವಿನಾಶ ಈತನ ವೇತನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ಸಹಾ ತಕರಾರಿಗೆ ಒಳಪಟ್ಟು ನಿಪಿ-21 ಎಂದು ಗುರುತಿಸಲಾಯಿತು. ಮೃತ ಅವಿನಾಶ ಈತನಿಗೆ ಸಂಬಂಧಪಟ್ಟ ಪಾಸ್‌ಪೋರ್ಟು ಹಾಜರುಪಡಿಸಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:** ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**